ಫ್ಯಾಬ್ರಿಕೇಷನ್ ಮಾಡುವುದು ಮಾಡುತ್ತಿದ್ದಾರೆ. ಕಳೆದ ೩-೪ ವರ್ಷದಲ್ಲಿ ಕೆ.ಎಸ್.ಆರ್.ಟಿ.ಸಿ. ಯವರು ಚಾಸಿಗಳನ್ನು ತೆಗೆದುಕೊಳ್ಳದೇ ಇದ್ದ ಕಾರಣದಿಂದ ಈ ಫ್ಯಾಕ್ಟರಿ ಇನ್ನೂ ಲಾಸಾಗಿದೆ. ಹೆಚ್ಚು ಚಾಸಿಗಳನ್ನು ತೆಗೆದುಕೊಂಡು ಎರಡೂ ಘಟಕಗಳಿಗೆ ಕೊಡಿ ಎಂದು ಕೆ.ಎಸ್.ಆರ್.ಟಿ.ಸಿ. ಯವರಿಗೆ ಹೇಳುತ್ತಾ ಇದ್ದೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಮಂತ್ರಿಗಳು ಇಷ್ಟು ಆರ್ಡರ್ ಮಾಡುತ್ತಾರೆಯೆ? ಪ್ರತಿ ತಿಂಗಳು ಬಾಡಿ ಕಟ್ಟುವುದಕ್ಕೆ ಚಾಸಿಸ್ ಬರುತ್ತವೆ, ಅವುಗಳನ್ನು ಖಾಸಗಿಯವರಿಗೆ ಏತಕ್ಕೆ ಕೊಡುತ್ತೀರಿ ? ಕೆ.ಎಸ್.ಆರ್.ಟಿ.ಸಿ.ಯ ಆಂಗಸಂಸ್ಥೆ ಇರುವಾಗ ಖಾಸಗಿ ಯವರಿಗೆ ಏತಕ್ಕೆ ಕೊಡಬೇಕು. ಹಿಂದೆ ಕೊಟ್ಟಿದ್ದು ಆಯಿತು. ಇನ್ನು ಮುಂದಕ್ಕಾದರೂ ಇವರಿಗೆ ಕೊಟ್ಟು ಹೆಚ್ಚಾದ ಮೇಲೆ ಬೇರೆಯವರಿಗೆ ಕೊಡುತ್ತೇವೆ ಎಂದು ಭರವಸೆ ಕೊಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಕೆ.ಎಸ್.ಆರ್.ಟಿ.ಸಿ. ಚಾಸಿಸ್ ಮಾತ್ರವಲ್ಲ ಖಾಸಗಿ ಯವರ ಚಾಸಿಸ್‌ಗಳನ್ನು ಕೂಡ ಬಾಡಿ ಕಟ್ಟಲಿಕ್ಕೆ ಕೊಡುತ್ತೇವೆ. ಕೆ ಎಸ್. ಆರ್. ಟಿ. ಸಿ ಯವರು ತೆಗೆದುಕೊಳ್ಳಲಿಲ್ಲ ಅಂದರೆ ಏನೂ ಮಾಡಲಿಕ್ಕೆ ಸಾಧ್ಯವಿಲ್ಲ. ಕೆ.ಎಸ್.ಆರ್ ಟಿ.ಸಿ. ಯವರ ಚಾಸಿಗಳನ್ನು ಕೊಡಲಿಕ್ಕೂ ಪ್ರಯತ್ನ ಮಾಡುತ್ತೇವೆ. ಖಾಸಗಿಯವರ ಚಾಸಿಗಳನ್ನು ಹಾಸನಕ್ಕೆ ಕಳುಹಿಸಿಕೊಡುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ನನ್ನ ಪ್ರಶ್ನೆ ಅದಲ್ಲ. ಈಗ ೫೦ ಚಾಸಿಸ್ ಪ್ರತಿ ತಿಂಗಳು ಬಾಡಿ ಬಿಲ್ಟ್‌ಅಪ್ ಮಾಡಲಿಕ್ಕೆ ಬಂದರೆ ಎರಡು ಮೂರು ಸ್ಕಾಂಪಲ್ ಕಿಮ್ಮೋಗೆ ಕೊಡುತ್ತಾರೆ. ಉಳಿದವನ್ನು ಪ್ರೈವೇಟ್‌ನವರಿಗೆ ಏತಕ್ಕೆ ಕೊಡುತ್ತಾರೆ. ಇನ್ನು ಎರಡನೆಯದು ಅಂದರೆ ನಮಗೆ ಚಾಸಿಸ್ ಕಟ್ಟಲಿಕ್ಕೆ ಫ್ಯಾಕ್ಟರಿಯಲ್ಲಿ ಎಷ್ಟು ಕೆಪಾಸಿಟಿ ಇದೆ ಅದಕ್ಕೆ ವಿಸ್ತರಿದ್ದು ಬೇರೆ ಕಡೆ ಕೊಡಿ. ಫುಲ್ ಕೆಪಾಸಿಟಿಗೆ ತಕ್ಕಹಾಗೆ ಇವರಿಗೆ ಬಂದಂಥ ಚಾಸಿಗಳನ್ನು ಬಾಡಿ ಬಿಲ್ಟ್‌ಅಪ್ ಮಾಡಲಿಕ್ಕೆ ಕಿಮ್ಮೋ ಫ್ಯಾಕ್ಟರಿಗೆ ಕೊಡುತ್ತೇವೆಂದು ಈ ಸದನದಲ್ಲಿ ಮಾನ್ಯ ಮಂತ್ರಿಗಳು ಭರವಸೆ ಕೊಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಕೆ.ಎಸ್.ಆರ್.ಟಿ.ಸಿ.ಗೆ ನಾವು ಕೇಳಿಕೊಳ್ಳುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ತಾವು ಕೇಳುವುದು ಅವರು 'ಹೌದು' ಎಂದು ಹೇಳುವುದು, ಆ ಮೇಲೆ ಬೇಡ ಎಂದು ಹೇಳುವುದು ಆದರೆ ಈಗ ವರ್ಕರ್ಸ್ ಗತಿ ಏನು. ಇವರು ಕೆಲಸ ಇಲ್ಲದೇ ಕುಳಿತಿದ್ದಾರಲ್ಲ ಅದರ ಬಗ್ಗೆ ಹೇಳಿ.

ಅಧ್ಯಕ್ಷರು.—ಈಗ ಎರಡು ಪ್ರಶ್ನೆಗಳು ಉದ್ಭವಿಸುತ್ತವೆ. ತಾವು ಕೆ ಎಸ್.ಆರ್.ಟಿ.ಸಿ.ಯವರಿಗೆ ಪ್ರತಿ ತಿಂಗಳು ಎಷ್ಟು ಛಾಸಿಸ್ ತರಿಸಿಕೊಳ್ಳುತ್ತೀರಾ ಎಂದು ಇನ್ನೊಂದು ಪ್ರಶ್ನೆ ಹಾಕಿ. ಉತ್ತರ ತರಿಸಿಕೊಳ್ಳಿ. ಆನಂತರ ಆ ಉತ್ತರದ ಆಧಾರದ ಮೇಲೆ ಮತ್ತೊಂದು ಪ್ರಶ್ನೆ ಇವರಿಗೆ ಹಾಕಿ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ ಪಕ್ಕಪಕ್ಕದಲ್ಲಿಯೇ ಕುಳಿತುಕೊಂಡಿರುತ್ತಾರೆ, ಇವರೇ ಮಾತನಾಡಿಕೊಂಡು ಮಾಡಲಿಕ್ಕೆ ಆಗುವುದಿಲ್ಲವೆ. ನಾನು ಮತ್ತೊಂದು ಪ್ರಶ್ನೆ ಕೇಳಿ, ಅದು ಆಲ್ಲಿಗೆ ಹೋಗಿ, ಮತ್ತೆ ಇಲ್ಲಿಗೆ ಬಂದು ಇದೆಲ್ಲಾ ಆಗುವುದರೊಳಗೆ ಈ ಅಧಿವೇಶನವೇ ಮುಗಿದು ಹೋಗುತ್ತದೆ ಅಥವಾ ನನ್ನ ಟರ್ಮ್ ಆಗುತ್ತದೆಯೋ ಏನೋ ಗೊತ್ತಿಲ್ಲ. ಆದ್ದರಿಂದ ಅವರು ಪಕ್ಕದಲ್ಲಿಯೇ ಕುಳಿತುಕೊಂಡಿದ್ದಾರೆ. ಈ ಪ್ರಶ್ನೆಯನ್ನು ಒಂದು ನಿಮಿಷದಲ್ಲಿ ಸಾಲ್ವ್ ಮಾಡಲಿಕ್ಕೆ ಆಗುವುದಿಲ್ಲವೆ.

ಅಧ್ಯಕ್ಷರು.—ಈ ಪ್ರಶ್ನೆಯನ್ನು ಸಾಲ್ವ್ ಮಾಡಿ. ಈಗ ಮುಂದಿನ ಪ್ರಶ್ನೆ.

ಕ್ವಾರಿಗಳು (ಬ್ಲಾಕ್ ಗ್ರಾನೈಟ್ ಪಿಂಕ್ ಗ್ರಾನೈಟ್) ಮಂಜೂರಾತಿ ನೀಡಿದ ಮೇಲೆ ನಿಯಮಗಳ ಬದಲಾವಣೆ

೭೫೬. ಶ್ರೀ ಎಂ. ಪಿ. ವೆಂಕಟೇಶ್ (ಹೆಗಡದೇವನ ಕೋಟೆ).—ಮಾನ್ಯ ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕ್ವಾರಿಗಳು (ಬ್ಲಾಕ್ ಗ್ರಾನೈಟ್, ಪಿಂಕ್ ಗ್ರಾನೈಟ್) ಮಂಜೂರಾತಿಯನ್ನು ನೀಡಿದ ಮೇಲೆ ನಿಯಮಗಳಲ್ಲಿ ಬದಲಾವಣೆ ಏನಾದರೂ ಆಗಿದೆಯೇ ?

ಆ) ಕ್ವಾರಿ ಮಂಜೂರಾತಿ ನಿಯಮಗಳು ಹಾಗೂ ಇತರೆ ನಿಬಂಧನೆಗಳು (ಷರತ್ತು) ಸಡಿಲವಾಗುವ ಅವಕಾಶಗಳು ಇರುವುದು ನಿಜವೆ ?

ಇ) ಕಚ್ಚಾ ಕರಿಕಲ್ಲು (ಬ್ಲಾಕ್ ಗ್ರಾನೈಟ್)ಗಳ ರಫ್ತು ನಿಯಮಗಳನ್ನು ಸಡಿಲಗೊಳಿಸುವ ಉದ್ದೇಶವಿದೆಯೇ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ಇನ್ನೂ ಲೀಸ್‌ಗಳನ್ನು ಮಂಜೂರು ಮಾಡುವುದಿಲ್ಲ ಮತ್ತು ಗ್ರಾನೈಟ್ ನೀತಿಯನ್ನು ಸಡಿಲಗೊಳಿಸಿದ ನಂತರ ಯಾವುದೇ ನಿಯಮಗಳು ಬದಲಾವಣೆಯಾಗಿಲ್ಲ.

ಆ) ಸಧ್ಯಕ್ಕೆ ಇಲ್ಲ.

ಇ) ಸಧ್ಯಕ್ಕೆ ಇಲ್ಲ.

ಶ್ರೀ ಎಂ. ಪಿ. ವೆಂಕಟೇಶ್.—ಸ್ವಾಮಿ, ನನ್ನ ಮೊದಲನೆ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಇನ್ನೂ ಲೀಸ್‌ಗಳನ್ನು ಮಂಜೂರು ಮಾಡಿರುವುದಿಲ್ಲ ಮತ್ತು ಗ್ರಾನೈಟ್ ನೀತಿಯನ್ನು ಸಡಿಲಗೊಳಿಸಿದನಂತರ ಯಾವುದೇ ನಿಯಮಗಳು ಬದಲಾವಣೆಯಾಗಿಲ್ಲ ಎಂದು ಹೇಳಿದ್ದಾರೆ. ಮುಂದೆ ಏನಾದರೂ ನಿಯಮಗಳನ್ನು ಬದಲಾವಣೆ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಬಿ. ಶಿವಣ್ಣ.—ಈಗ ಇಲ್ಲ ಎಂದು ಹೇಳಿದ್ದೇನೆ, ಮುಂದೆ ವಿಚಾರ ಮಾಡುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.—ನನ್ನ ಎರಡನೆಯ ಪ್ರಶ್ನೆಗೆ ಸಧ್ಯಕ್ಕೆ ಇಲ್ಲ ಎಂದು ಹೇಳಿದ್ದಾರೆ. ಮುಂದೆ ಮಾಡುವ ಉದ್ದೇಶ ಇದೆಯೆ ?

ಶ್ರೀ ಬಿ. ಶಿವಣ್ಣ.—ಈಗ ಉದ್ದೇಶ ಅಂತೂ ಇಲ್ಲ. ಮುಂದೆ ಪರಿಸ್ಥಿತಿ ಮೇಲೆ ಡಿಪೆಂಡ್ ಆಗುತ್ತದೆ.

ಶ್ರೀ ಎಂ. ಪಿ. ವೆಂಕಟೇಶ್ —ನನ್ನ ಮೂರನೆಯ ಪ್ರಶ್ನೆಗೂ ಸಹಿತ ಸಧ್ಯಕ್ಕೆ ಇಲ್ಲ ಎಂದು ಹೇಳಿದ್ದಾರೆ. ಈಗ ಕಚ್ಚಾ ಕರಿಕಲ್ಲು ರಫ್ತು ಮಾಡುವುದನ್ನು ನಿಲ್ಲಿಸಿದ್ದೇವೆ, ಈ ನಿಯಮ ೩೦ಳರ ಪ್ರಕಾರ ಆದೇಶ ಹೊರಡಿಸಿದ್ದೇವೆ. ಇದರ ಪ್ರಕಾರ ಇಲ್ಲ ಎಂದು ಹೇಳುತ್ತೀರಿ. ಮಂಜೂರಾತಿ ಮಾಡುವಾಗ ಈ ಒಂದು ಕಾನೂನಿನಲ್ಲಿ ಬದಲಾವಣೆ ಇಲ್ಲ ಎಂದು ಹೇಳುತ್ತೀರಿ ಆದರೆ ಮಂಜೂರಾತಿ ಮಾಡಿ ಆದ ಮೇಲೆ ಈಗ ಬೇಡಿಕೆ ಇಲ್ಲ, ಸರ್ಕಾರಕ್ಕೆ ದುಡ್ಡು ಬರುವುದಿಲ್ಲ. ಬಹಳ ಲಾಸ್ ಆಗಿದೆ, ಆದುದರಿಂದ ಆದಾಯ ಬರುವುದಿಲ್ಲವೆಂದು ಹೇಳಿ, ಮತ್ತೆ ನಿಯಮಗಳನ್ನು ಸಡಿಲ ಮಾಡುವ ಉದ್ದೇಶವಿದೆಯೇ ತಾವು ಈ ರಾಜ್ಯಕ್ಕೆ ಹೆಚ್ಚಿನ ಹಣ ಬರುತ್ತದೆ, ಆದ್ದರಿಂದ ರಫ್ತು ಮಾಡುವುದನ್ನು ನಿಲ್ಲಿಸಿದ್ದೇವೆಂದು ಹೇಳಿಕೊಳ್ಳುತ್ತಿದ್ದೀರಿ. ಅದು ಮಂಜೂರಾತಿ ಆದಮೇಲೆ ರಾಮೇಟೀರಿಯಲ್ಸ್ ಕಳುಹಿಸಬಹುದು ಎನ್ನುವ ಉದ್ದೇಶ ಏನಾದರೂ ಇದೆಯೇ. ಇದು ಬಹಳ ಮುಖ್ಯ. ತಾವು ಪರಿಶೀಲನೆ ಮಾಡುತ್ತೇವೆ ಚರ್ಚಿಸುತ್ತೇವೆ ಅಂದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಬಿ. ಶಿವಣ್ಣ.—ಸಧ್ಯಕ್ಕೆ ನಾವು ಏನೂ ಮಾಡುವುದಿಲ್ಲ. ಪರಿಸ್ಥಿತಿ ಹೇಗೆ ಬರುತ್ತದೆ. ಆದರ ಮೇಲೆ ಡಿಪೆಂಡ್ ಆಗುತ್ತದೆ.

ಶ್ರೀ ಎಂ. ಪಿ. ವೆಂಕಟೇಶ್.—ಕಚ್ಚಾ ಮಾಲು ಕಳುಹಿಸಲಿಕ್ಕೆ ನಿಷೇಧ ಮಾಡಿದ್ದೇವೆಂದು ತಾವು ಬಹಳ ದೊಡ್ಡದಾಗಿ ಹೇಳಿಕೊಳ್ಳುತ್ತಿದ್ದೀರಿ. ನಾಳೆ ಮಂಜೂರಾತಿ ಮಾಡಿದ ಮೇಲೆ ಈ ಇಂಡಸ್ಟ್ರೀಸ್‌ಗೆ ಕೊಟ್ಟಬಿಟ್ಟು ದುಡ್ಡು ಬಂದಿಲ್ಲ, ರಾಜ್ಯದ ಬೊಕ್ಕಸಕ್ಕೆ ತೊಂದರೆಯಾಗುತ್ತದೆ ಎಂದು ನಿಯಮಗಳನ್ನು ಸಡಿಲ ಮಾಡುವ ಉದ್ದೇಶ ಇದೆಯೇ ? ಈಗ ಇಲ್ಲ ಎಂದು ಹೇಳಬಹುದು, ಮುಂದೆ ಮಾಡುವ ಉದ್ದೇಶ ಇದೆಯೇ.

ಅಧ್ಯಕ್ಷರು.—ಅವರ ಉದ್ದೇಶ ಇಲ್ಲವೆ ಇರುವಾಗ ಇವೆ ಎಂದು ಹೇಗೆ ಹೇಳುತ್ತಾರೆ. ಆಗಲೇ ಪರಿಸ್ಥಿತಿ ಮೇಲೆ ಡಿಪೆಂಡ್ ಆಗುತ್ತದೆ ಎಂದು ಹೇಳಿದ್ದಾರೆ.

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಮಂತ್ರಿಗಳ ಉದ್ದೇಶ ಏನಿದೆ ಎನ್ನುವುದನ್ನು ಹೇಳಬೇಕು.

ಶ್ರೀ ಬಿ. ಶಿವಣ್ಣ.—ನಾವು ಪರಿಸ್ಥಿತಿ ಮೇಲೆ ಡಿಪೆಂಡ್ ಆಗಬೇಕಾಗುತ್ತದೆ.

ಅಧ್ಯಕ್ಷರು.—ಮಳೆ ಬೆಳೆ ಪರಿಸ್ಥಿತಿಯೇ, ಯಾವ ಪರಿಸ್ಥಿತಿ ಎಂದು ಹೇಳಿ.

ಶ್ರೀ ಬಿ. ಶಿವಣ್ಣ.—ಅಧ್ಯಕ್ಷರೆ, ಈಗ ಸಧ್ಯಕ್ಕೆ ಇಲ್ಲ. ಲಿಬರಲೈಸೇಷನ್ ಆಫ್ ಗ್ರಾನೈಟ್ ಪಾಲಿಸಿ ಇಂಪ್ಲಿಮೆಂಟ್ ಮಾಡುವ ಸಂದರ್ಭಕ್ಕೆ ಏನಾದರೂ ಅಂತಹ ಚೇಂಜಸ್ ಮಾಡುವಂತಹ ಪ್ರಸಂಗ ಬಂದರೆ ಮಾಡಬಹುದು. ಈಗ ಇಲ್ಲ ಎಂದು ಹೇಳಿದ್ದೇವೆ.

ಅಧ್ಯಕ್ಷರು.—ಈಗ ತಾವು ಫೈನಲ್ ಉತ್ತರ ಅವರಿಗೆ ಹೇಳಿಬಿಡಿ. ಪ್ರಸಂಗ ಬಿದ್ದರೂ ಮಾಡುವುದಿಲ್ಲವೆ ?

ಶ್ರೀ ಬಿ. ಶಿವಣ್ಣ.—ಅದು Discretion of the Government.

ಕೆ.ಇ.ಬಿ.ಯಲ್ಲಿ ಕಿರಿಯ ಸಹಾಯಕರುಗಳ ಹುದ್ದೆಗಳು ಖಾಲಿ ಇರುವ ಬಗ್ಗೆ

ಉಳಿಕೆ ಶ್ರೀ ಷಫಿ ಅಹಮದ್ (ತುಮಕೂರು).—ಮಾನ್ಯ ಕೈಗಾರಿಕಾ, ಇಂಧನ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಕೆ.ಇ.ಬಿ.ಯ ಬೆಂಗಳೂರು ವೃತ್ತದವರು ೧೯೮೮ರಲ್ಲಿ ಕಿರಿಯ ಸಹಾಯಕರುಗಳ ಹುದ್ದೆಗಳಿಗೆ ಸಂದರ್ಶನ ನಡೆಸಿ, ೧೯೮೮ರಲ್ಲಿ ೨ ಪಟ್ಟಿಗಳನ್ನು (ಮೈನ್ ಮತ್ತು ಅಡಿಷನಲ್) ಪ್ರಕಟಪಡಿಸಿದುದು ನಿಜವೇ?

೨) ಸೆಲೆಕ್ಟ್ ಆದ ಎಲ್ಲಾ ಅಭ್ಯರ್ಥಿಗಳಿಗೂ ನೇಮಕಾತಿ ಆದೇಶಗಳನ್ನು ಇಲ್ಲಿಯವರೆವಿಗೂ ಕಳುಹಿಸದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

೩) ಬೆಂಗಳೂರು ವೃತ್ತ ಕೆ.ಇ.ಬಿ.ಯಲ್ಲಿ ಸುಮಾರು ೨೦೦ ಕಿರಿಯ ಸಹಾಯಕರುಗಳ ಹುದ್ದೆಗಳು ಖಾಲಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

೪) ಹಾಗಿದ್ದಲ್ಲಿ ಆಧಿಕ ಪಟ್ಟಿಯಲ್ಲಿರುವ ಸೆಲೆಕ್ಟ್ ಆಗಿರುವ ಎಲ್ಲಾ ಅಭ್ಯರ್ಥಿಗಳಿಗೂ ನೇಮಕಾತಿ ಆದೇಶಗಳನ್ನು ಕಳುಹಿಸಲಾಗುವುದೇ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಮಂತ್ರಿಗಳು).—

೧) ಹೌದು.

೨) ಹೌದು, ಮಂಡಳಿಯ ಗಮನಕ್ಕೆ ಬಂದಿದೆ.

೩) ಆವಶ್ಯಕತೆ ಆಧಾರದ ಮೇಲೆ ೧೯೮೮-೮೯ರಲ್ಲಿ ರಂದು ಕಿರಿಯ ಸಹಾಯಕರುಗಳ ನಿಬ್ಬಂದಿಯನ್ನು ಮಂಜೂರು ಮಾಡಿದ ಕಾರಣ ೩೧-೫-೮೯ರಲ್ಲಿರುವಂತೆ ಬೆಂಗಳೂರು ವೃತ್ತದಲ್ಲಿ ೨೧೫ ಕಿರಿಯ ಸಹಾಯಕರುಗಳ ಹುದ್ದೆಗಳು ಖಾಲಿ ಇದ್ದವು.

೪) ಈ ವಿಷಯವನ್ನು ಪರಿಶೀಲಿಸಲಾಗುವುದು.

ಶ್ರೀ ಷಫಿ ಅಹಮದ್.—ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಬೆಂಗಳೂರು ವೃತ್ತದ ಕೆ. ಇ. ಬಿ ಯಲ್ಲಿ ೨೧೦ ಕಿರಿಯ ಸಹಾಯಕರ ವೇಕೆನ್ಸೀಸ್ ಏನಿದೆ ಅದನ್ನು ತುಂಬಲಿಕ್ಕೆ ಪರಿಶೀಲಿಸುತ್ತೇವೆಂದು ಕೊಟ್ಟಿದ್ದಾರೆ. ಅದರ ಬಗ್ಗೆ ಸನ್ಮಾನ್ಯ ಸಚಿವರು ವಿವರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ದಯವಿಟ್ಟು ಇನ್ನೊಂದು ಸಲ ಪ್ರಶ್ನೆ ಕೇಳಿ.

SRI SHAFI AHMED.—"Whether the Government is aware that thereare about 200 posts of Junior Assistants still vacant in the Bangalore Circle, K.E B."? ಇದರ ಬಗ್ಗೆ ತಾವು 'ಎಸ್' ಎಂದು ಉತ್ತರವನ್ನು ಕೊಟ್ಟಿದ್ದೀರಿ ಈ ಪೋಸ್ಟ್‌ಗಳನ್ನು ತಾವು ಯಾವಾಗ ಫಿಲಪ್ ಮಾಡಂತ್ತೀರಿ ಮತ್ತು ಎಷ್ಟು ದಿವಸದಲ್ಲಿ ಮಾಡುತ್ತೀರಿ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಎಸ್. ಎಂ. ಯಾಹ್ಯಾ.—ಈಗ ವೇಕೆನ್ಸಿ ಬಹಳ ಇದೆ. ಎಕೆನಾಮಿ ರಿಲ್ಯಾಕ್ಸೇಷನ್ ಎಲ್ಲ ಮಾಡಿ ಮಾಡಬೇಕಾಗಿದೆ ಕೆಲಸದ ಒತ್ತಡ ಇದ್ದ ಹಾಗೆ ನಾವು ಇನ್ನೂ ಹೆಚ್ಚು ರೆಕ್ರೂಟ್‌ಮೆಂಟ್ ಮಾಡಬೇಕೆಂದು ಇದ್ದೇವೆ.

ಶ್ರೀ ಷಫಿ ಅಹಮದ್.—ಸುಮಾರು ಒಂದು ಸಾವಿರಕ್ಕಿಂತ ಹೆಚ್ಚು ವೇಕೆನ್ಸೀಸ್ ಇದೆ ಎಂದು ತಿಳಿಸಿದ್ದೀರಿ. ಅದಷ್ಟು ಬೇಗ ಫಿಲಪ್ ಮಾಡಿದರೆ ಇವರಿಗೆ ಕೆಲಸವನ್ನು ದೊರಕಿಸಿಕೊಟ್ಟಹಾಗಾಗುತ್ತದೆ.

ಶ್ರೀ ಎಸ್. ಎಂ. ಯಾಹ್ಯಾ.—ಪ್ರಯತ್ನ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ರಾಮಲಿಂಗರೆಡ್ಡಿಯವರು ಗೈರು ಹಾಜರಾಗಿದ್ದರು)